
ಮಹಾವೀರ ಕಾಸರ, ಶಿವಮೊಗ್ಗ
ಸಿಗರೇಟ್, ಬೀಡಿ ಸೇದದಿದ್ದರೂ ಕ್ಯಾನ್ಸರ್ ಬರುತ್ತದಲ್ಲ, ಏಕೆ?




ಹೊಗೆ ಹಾಕಿಸುವಷ್ಟು ಹೊಗೆ ಬಿಡುವ ವಾಹನಗಳ ಹೊಗೆ ಕುಡಿದಿರುತ್ತಾರಲ್ಲ! ಮಾಲಿನ್ಯ ಮಸಣದ ಮೆಟ್ಟಿಲು.

ಗಂಜಾಂ ನಾಗರಾಜ, ಮೈಸೂರು
ಬ್ರಹ್ಮ ತಾನು ಸೃಷ್ಟಿಸಿದ ಸರಸ್ವತಿಯನ್ನೇ ಲಗ್ನವಾಗಿದ್ದು ಆಗಲೇ ಹೆಣ್ಣಿನ ಅಭಾವ ಇತ್ತೆಂಬುದಕ್ಕೆ ಸೂಚನೆಯೆ?
ಊಹೂಂ. ಆಗಲೂ ಗಂಡಿನ ಮೇಲೆ ಬುದ್ಧಿವಂತ ಹೆಣ್ಣಿನ ಪ್ರಭಾವ ಇತ್ತೆಂಬುದಕ್ಕೆ ಸೂಚನೆ.

ಎ.ಕೆ. ಪಟ್ಟಾಭಿ, ಬೆಂಗಳೂರು
ಸ್ತ್ರೀಬುದ್ಧಿ ಪ್ರಳಯಾಂತಕ; ಪುರುಷ ಬುದ್ಧಿ?
ಪ್ರಣಯ ಯಾಚಕ.

ಹಾಡ್ಯ ಬ. ಜಯಾನಂದ, ಮೈಸೂರು
ಸಂಘಟನೆಗಳು ಬೇಕಾದ್ದನ್ನು ಬಂದ್ ಮಾಡಬಹುದು. ಆದರೆ ಒಂದನ್ನು ಬಂದ್ ಮಾಡಲು ಸಾಧ್ಯವಿಲ್ಲ. ಯಾವುದದು?



ಹಸಿವು.

ಮೆಹಬೂಬ ಶೇಖಬಡಿ, ಮೂಡಲಗಿ
ಬಾಲ್ಯದಲ್ಲಿ ಆಟಿಕೆಗಳೇ ಜೀವನವಾಗಿತ್ತು. ಈಗ ಜೀವನವೇ ಆಟವಾಗಿದೆಯಲ್ಲ...?
ಬದುಕೆಂದೂ ಆಟವೇ... ಬಾಲ್ಯದಲ್ಲಿ ಹುಡುಗಾಟ, ಯೌವನದಲ್ಲಿ ಹುಡುಕಾಟ, ವೃದ್ಧಾಪ್ಯದಲ್ಲಿ ಒದ್ದಾಟ.

ವಿ. ಹಮೀದ್, ವಿಟ್ಲ
ಹರಿಯುವ ಹೊಳೆಗೆ ಅಣೆಕಟ್ಟು. ಹರಿಯುವ ಲವ್ವಿಗೆ...?
ತಾಳಿ ಕಟ್ಟು.

ಬಿ. ಚಂದ್ರೇಗೌಡ, ಬೆಂಗಳೂರು
ಮೌನ ಮಾತಾಗುವುದು ಯಾವಾಗ?
ರಹಸ್ಯ ಸುದ್ದಿ ಬ್ರೇಕಿಂಗ್ ನ್ಯೂಸ್ ಆದಾಗ.

ಪಿ. ಜಯವಂತ ಪೈ, ಕುಂದಾಪುರ
ಬಹುತೇಕರು ತಿರುಪತಿಗೆ ಹೋಗಿ ತಿಮ್ಮಪ್ಪನ ಹುಂಡಿಗೇ ಹಣ ಸುರಿದು ಬರುವುದೇಕೆ?
ತಿಮ್ಮಪ್ಪ ಹಿರಿಯ; ಸಾಲ ಮಾಡಿದ್ದಾನೆ; ಹಿರಿಯರ ಋಣ ತೀರಿಸುವುದು ಕಿರಿಯರ ಕರ್ತವ್ಯ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಜೀವನದಲ್ಲಿ ನಿಜವಾದ ಆಸ್ತಿ ಯಾವುದು?
ಸರಾಗವಾದ ಉಸಿರಾಟ.

ಎಚ್.ಆರ್. ಪ್ರಕಾಶ್, ಶಿವಮೊಗ್ಗ
ಟಚ್ ಸ್ಕ್ರೀನ್ ಮೊಬೈಲ್ ಬಂದಮೇಲೆ ಟಚಿಂಗ್ ಜೋರಾಗಿದೆಯಲ್ಲ...?
ಹುಚ್ಚಪ್ಪ. ಟಚಿಂಗ್ ಎಂದೋ ಇತ್ತು. ಮದರ್ ತೆರೇಸಾ ಸ್ಪರ್ಶಕ್ಕೆ ಹಾತೊರೆದವರು ಎನಿತೋ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಸರ್ಕಾರವೆಂದರೆ ರಸಪುರಿ ಮಾವಿನ ಹಣ್ಣು. ಸಮ್ಮಿಶ್ರ ಸರ್ಕಾರ ಎಂದರೆ?
ಓಟೆ ಇದೆ, ಸಿಪ್ಪೆ ಇದೆ. ತಿರುಳು ಮಂಗಮಾಯ!

ಹರಿತಸ, ಬೆಂಗಳೂರು
ವೃದ್ಧಾಶ್ರಮಗಳು ಬೇಕೆ?
ಮಕ್ಕಳಿಗೆ ಹಿರಿಯರು ಟೆಡ್ಡಿ ಬೇರ್ ಆಗಿದ್ದರೆ ಬೇಡ; ಫುಟ್ಬಾಲ್ ಆಗಿದ್ದರೆ ಬೇಕು.

ಕುಮಾರ ಚಲವಾದಿ, ಹಾಸನ
ಅಧ್ಯಾತ್ಮ ನನಗೆ ಆಗಿಬರುವುದಿಲ್ಲ. ಏಕಿರಬಹುದು?
ಇನ್ನೂ ಕುಮಾರರಲ್ಲವೇ! ಕೌಮಾರ್ಯ ಮನದಲ್ಲಿರುವವರೆಗೆ ಅಧ್ಯಾತ್ಮ ದೂರ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಹಸಿದವನಿಗೆ ಅನ್ನವಿಲ್ಲ, ಅನ್ನವಿದ್ದವನಿಗೆ ಹಸಿವಿಲ್ಲ. ಏಕಿರಬಹುದು?
ತಿಳಿಯಿತು. ಮೊದಲನೆಯವನಿಗೆ ಡಯಾಬಿಟಿಸ್; ಎರಡನೆಯವನಿಗೆ ಅಸಿಡಿಟಿ.

## ಬಹುಮಾನಿತ ಪ್ರಶ್ನೆ

ರತ್ನಜ, ಮೈಸೂರು
ಏನೂ ಖರ್ಚಿಲ್ಲದ ಮನರಂಜನೆ ಯಾವುದು?
ಪಕ್ಕದ ಮನೆಯಲ್ಲಿ ನಡೆಯುವ ಜಗಳ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
ಆಂಟಿಯರು ಹುಡುಗಿಯರಿಗಿಂತ ಜಾಸ್ತಿ ಮೇಕಪ್ ಮಾಡಿಕೊಳ್ಳಲು ಕಾರಣವೇನು?
ಹುಡುಗರ ದೃಷ್ಟಿಯಷ್ಟು ಚುರುಕಿಲ್ಲದ ಅಂಕಲ್‌ಗಳ 'ಸಮೀಪ ದೃಷ್ಟಿ'ಯಲ್ಲೂ ಚೆನ್ನಾಗಿ ಕಾಣಿಸಲು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಮದುವೆ ಮತ್ತು ಮರಣಗಳಲ್ಲಿ ಅಂತರವೇನು?
ಒಂದೇ ಅಕ್ಷರ ವ್ಯತ್ಯಾಸ; ವಿಶ್ವಾಸದ ಉತ್ತುಂಗವೇ ಮದುವೆ; ನಿಶ್ವಾಸದ ಉತ್ತುಂಗವೇ ಮರಣ.

ಎಸ್. ಕೃಷ್ಣಮೂರ್ತಿ, ಬೆಂಗಳೂರು
ಉಪಕಾರ ಮಾಡುವುದು ತುಂಬಾ ಅಪಾಯಕರ ಎಂಬುದು ನನ್ನ ಸ್ವಾನುಭವದ ಮಾತು. ನೀವೇನಂತೀರಿ?



ಒಪ್ಪಲಾರೆ. ಹಾವಿಗೂ ಹಾಲೆರೆಯಬೇಕು ಅದು ಕಚ್ಚದಷ್ಟು ದೂರ ಇರುವ ಜಾಣತನವೂ ಇರಬೇಕು.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಬೆಳಿಗ್ಗೆ ಗುಡ್ ಮಾರ್ನಿಂಗ್ ಎನ್ನುತ್ತಾರೆ; ರಾತ್ರಿ ಗುಡ್ ನೈಟ್ ಎನ್ನುತ್ತಾರೆ. ಇವೆರಡರ ಮಧ್ಯೆ ಏನು ಹೇಳಬೇಕು?
ಮಾರ್ನಿಂಗ್ ಮತ್ತು ನೈಟ್ ಗುಡ್ ಆಗಿರಲು ಅವಶ್ಯವಾದ ಕಾರ್ಯಗಳನ್ನು, ಹೇಳುವುದಲ್ಲ, ಮಾಡಬೇಕು!

■ ರಾಮ್